


# ಕಾಣದೆ ಹೋದ ದೋಣಿ

ರಾಜು ಯಾವಾಗಲೂ ತನ್ನ ಕೈಕೆಲಸವನ್ನು ನೋಡಿ ತೃಪ್ತಿಗೊಳ್ಳುತ್ತಲೇ ಇದ್ದನು. ಯಾಕೆಂದರೆ ಬಹು ಶ್ರದ್ಧೆಯಿಂದ ಶ್ರಮಿಸಿಕೊಳ್ಳದೆ ಬಹುಪ್ರಯಾಸಪಟ್ಟು ಒಂದು ಚಿಕ್ಕ ದೋಣಿಯನ್ನು ಒಂದುವಾರದೊಳಗೆ ಬಹು ಸುಂದರವಾಗಿ ಮಾಡಿದ್ದನು. ಆಹಾ.. ಎಷ್ಟು ಲಕ್ಷಣ! ಎಷ್ಟು ಸುಂದರ ಎನ್ನುತ್ತಲೇ ಸಂತೋಷವಾಗಿದ್ದನು.

ಈ ಸುಂದರವಾದ ದೋಣಿಯನ್ನು ನದಿಯ ತೀರಕ್ಕೆ ಬಿಟ್ಟು ಆಟವಾಡಿದರೆ ಅಥವಾ ಹರಿಯಲು ಎಷ್ಟು ಚೆನ್ನಾಗಿರುತ್ತದೆ ಎಂದು ಯೋಚಿಸಿ, ಬೇಗಬೇಗನೆ ನದಿಯ ಕಡೆಗೆ ಓಡಿದನು. ಏದುಸಿರಿನೊಂದಿಗೆ ಓಡಿಬಂದ ರಾಜು ಆ ದೋಣಿಯನ್ನು ನದಿಯಲ್ಲಿ ಹರಿಯಲು ಬಿಟ್ಟನು. ಆ ದೋಣಿ ಅತ್ತಿತ್ತಾ ಅಲುಗುತ್ತಾ ತೇಲಾಡುವದನ್ನು ಕಂಡು ಬಹು ಸಂತೋಷಿಸಿದನು. ಆದರೆ ಆ ಒಂದು ಸಂಧರ್ಭದಲ್ಲಿ ಅವನು ಊಹಿಸಿಕೂಡ ನೋಡದ ವೇಳೆಯಲ್ಲಿ ಇದ್ದಕಿದ್ದಂತೆ ರಭಸವಾದ ಬಿರುಗಾಳಿ ಬೀಸಲು ಆ ದೋಣಿ ನದಿ ಹರಿದು ಹೋಗುವ ಕಡೆಗೆ ಹರಿದುಹೋಯಿತು. ಆಗ ಅವನು ತನ್ನ ಚಿಕ್ಕ ದೋಣಿಯನ್ನು ತೆಗೆಯಲು ಬಹು ಪ್ರಯತ್ನಮಾಡಿದರೂ ಅದು ಅವನಿಗೆ ಸಿಗಲೇ ಇಲ್ಲ. ಮೋಸಹೋಗಿ ಬರಿಕೈಯಿಂದ ರಾಜು ತನ್ನ ಮನೆಗೆ ಬಂದು ಸೇರಿದನು. ತಾವು ಕಷ್ಟದಿಂದ ಮಾಡಿದ ವಸ್ತುವೊಂದು ತಮ್ಮ ಕಣ್ಣಮುಂದೆಯೇ ಕಳಕೊಂಡರೇ ಯಾರಿಗೆ ತಾನೆ ದುಃಖವಿರೋದಿಲ್ಲ ಹೇಳಿ?

ಎರಡು ದಿನಗಳ ನಂತರ ಅಂಗಡಿ ಬೀದಿ ಕಡೆ ಹಾದು ಹೋದ ರಾಜುವಿಗೆ ಒಂದು ಆಶ್ಚರ್ಯ ಸಂಗತಿ ಕಾದಿತ್ತು.

ಅಂಗಡಿ ಬೀದಿಯ ಒಂದು ಮೂಲೆಯಲ್ಲಿ ಮಾರಾಟಕ್ಕಾಗಿ ಇಡಲ್ಪಟ್ಟಿದ್ದಂತ ಒಂದು ಸಣ್ಣ ದೋಣಿಯನ್ನು ನೋಡಿದನು. ಆ ಸುಂದರವಾದ ದೋಣಿ ರಾಜು ಮಾಡಿದ ಅದೇ ದೋಣಿ. ಅವನಿಗೆ ಅದನ್ನು ನಂಬಲು ಸಾಧ್ಯವೇ ಆಗಲಿಲ್ಲ.

ರಾಜು ಸಂತೋಷದಿಂದ ಆ ಅಂಗಡಿಯೊಳಗೆ ನುಗ್ಗಿ, ಅಂಗಡಿ ಮಾಲೀಕರ ಬಳಿ, ಬಹು ಹಕ್ಕಿನಿಂದ ಹೇಳಿದನು, "ಸ್ವಾಮಿ, ಆ ಸುಂದರವಾದ ದೋಣಿ ನನ್ನದು. ನಾನು ಅದನ್ನು ಕಷ್ಟಪಟ್ಟು ಮಾಡಿದ್ದೇನೆ. ಇದನ್ನು ನೀವು ನನಗೆ ಕೊಡಬೇಕು" ಎಂದು ಕೇಳಿದನು. ಅಂಗಡಿಮಾಲೀಕನು ಅವನ ಬಳಿ "ತಮ್ಮ, ಈ ದೋಣಿಯನ್ನು ನಾನು ಒಬ್ಬ ವ್ಯಕ್ತಿಯ ಬಳಿ ಐವತ್ತು ರೂಪಾಯಿಗೆ ಖರೀಸಿದ್ದೇನೆ. ನೀನು ನಿನ್ನದು ಎಂದು ಹೇಳುವದರಿಂದ, ನಾನು ಖರೀದಿಸಿದ ಅದೇ ಹಣಕ್ಕೆ ಬೇಕಾದರೆ ನೀನು ಪಡೆದುಕೊ. ನೀನು ಇದು ನಿನ್ನ ದೋಣಿ ಎಂದು ಹೇಳುವದರಿಂದ ನಾನು ಸುಮ್ಮನೆ ಇದನ್ನು ನಿನಗೆ ಕೊಡಲಾಗುವದಿಲ್ಲ." ಎಂದು ಹೇಳಿದನು.

ನಾನು ಮಾಡಿದ ನನ್ನ ದೋಣಿಯನ್ನು ನಾನೇ ಐವತ್ತು ರೂಪಾಯಿ ಕೊಟ್ಟು ತಕ್ಕೊಳ್ಳಬೇಕೆ? ಎಂದು ರಾಜು ಸ್ವಲ್ಪವೂ ಯೋಚಿಸಲೇ ಇಲ್ಲ. ತಕ್ಷಣ ತನ್ನ ಮನೆಗೆ ಓಡಿಬಂದನು. ತನ್ನ ಹುಂಡಿಯಲ್ಲಿದಂತಹ ಹಣದಲ್ಲಿ ಐವತ್ತು ರೂಪಾಯಿಯನ್ನು ಆಯ್ದು ತೆಗೆದು ಬೇಗ ಬೇಗನೆ ಆ ಅಂಗಡಿಗೆ ಬಂದನು. ಹಾಳಾಗಿದ್ದ ಆ ದೋಣಿಯನ್ನು ಮ ತ್ತೇ ದುಡ್ಡುಕೊಟ್ಟು ಹಿಂಪಡೆದು. ತನ್ನ ಎದೆಗೆ ಅಪ್ಪಿಕೊಂಡು ಏದುಸಿರೆಳೆ ದನು ಅಂದರೆ ಬಹು ಸಂತೋಷಗೊಂಡನು.

ಪ್ರಿಯರೇ, ರಾಜುವಿನ ಚಿಕ್ಕ ಹಡಗಿನಂತೆಯೇ ನಾವು ಇದ್ದೇವೆ. ದೇವರಾದ ಯೇಸುಕ್ರಿಸ್ತನೇ ನಮ್ಮನ್ನು ಉಂಟು ಮಾಡಿದನು ರಾಜುವಿನ ಹಡಗು ಕಾಣವಾದಂತೆಯೇ ನಾವು ಪಾಪಮಾಡಿ ನಮ್ಮನ್ನು ಉಂಟು ಮಾಡಿದಾತನನ್ನು ಬಿಟ್ಟು ದೂರಕ್ಕೆ ಹೋಗಿ ಬಿಟ್ಟೆವು ಆದರೆ ನಮ್ಮನ್ನು ಉಂಟು ಮಾಡಿದಾತನು ನಮ್ಮನ್ನು ಪ್ರೀತಿಯಿಂದ ಹುಡುಕಿ ಬಂದನು.

ರಾಜು ತನ್ನ ಹಡಗನ್ನು ಮತ್ತೆ ಕ್ರಯಕ್ಕೆ ತೆಗೆದುಕೊಂಡಂತೆ ದೇವರಾದ ಯೇಸು ಕ್ರಿಸ್ತನು ತನ್ನ ಸ್ವರಕ್ತವನ್ನು ನಮಗಾಗಿ ಶಿಲುಬೆಯಲ್ಲಿ ಸುರಿಸಿದನು ಯಾಕೆ? ಆತನಿಂದ ಉಂಟು ಮಾಡಲ್ಪಟ್ಟ ನಾವು ಆತನಿಗೆ ಸ್ವಂತವಾಗ ಬೇಕು ಎಂಬುವುದಕ್ಕಾಗಿ.

ರಾಜು ಆ ಹಡಗನ್ನು ಬಹಳವಾಗಿ ಪ್ರೀತಿಸಿದ್ದರಿಂದ ಆ ಹಣವೂ ಅವನಿಗೆ ದೊಡ್ಡದ್ದಾಗಿ ಕಾಣಲಿಲ್ಲ. ತನ್ನ ವಸ್ತುವನ್ನು ಮತ್ತೆ ಪಡೆದುಕೊಳ್ಳಬೇಕೆಂಬುದು ಮಾತ್ರ ಅವನಿಗೆ ದೊಡ್ಡದ್ದಾಗಿ ಕಂಡಿತು ಇದೇ ರೀತಿ ದೇವರಾದ ಯೇಸು ಕ್ರಿಸ್ತನು ನಮ್ಮ ಮೇಲೆ ಇಟ್ಟಿದ ಮಹಾಪ್ರೀತಿಯ ನಿಮಿತ ತನ್ನ ಸ್ವಂತ ಜೀವವನ್ನೇ ನಮಗಾಗಿ ನೀಡಿದನು.

ನೋಡಿ! ದೇವರು ನಮ್ಮ ಮೇಲೆ ಇಟ್ಟಂತಹ ಪ್ರೀತಿ ಎಷ್ಟೆಂಬುದನ್ನು.

ಪಾಪದಿಂದ, ಅಶುದ್ಧದಿಂದ, ಅಸಹ್ಯ ಕೃತ್ಯಗಳಿಂದ ನಿಮ್ಮ ಜೀವಿತವು ಇಂದು ನಾಶವಾಗುತ್ತಿರಬಹುದು. ದೇವರನ್ನು ಬಿಟ್ಟು ದೂರ ಹೋಗಿರಬಹುದು, ಆದರೆ ದೇವರಾದ ಯೇಸು ಕ್ರಿಸ್ತನು ಪಾಪದಿಂದ ನಿನ್ನ ಜೀವಿತವನ್ನು ಬಿಡಿಸಿಕೊಳ್ಳಲು ಇಂದು ಪ್ರೀತಿಯಿಂದ ಕರೆಯುತ್ತಾನೆ ನೀವು ಆತನಿಗೆ ವಿರುದ್ಧವಾಗಿ ಎಷ್ಟೋ ಪಾಪವನ್ನು ಮಾಡಿದ್ದರೂ ಇಂದೇ ಮಾನಸ್ಸಾಂತರ ಹೊಂದಿ ಆತನ ಬಳಿ ಕ್ಷಮಾಪಣೆ ಕೇಳಿದರೆ ಆತನು ನಿಮ್ಮನ್ನು ತಳ್ಳಿ ಬಿಡದೆ ನಿಮ್ಮನ್ನು ಪಾಪದಿಂದ ಬಿಡಿಸುವನು ನಮಗಾಗಿ ಕ್ರಯಕ್ಕೆ ಕೊಟ್ಟು ನಮ್ಮನ್ನು ಬಿಡಿಸಿಕೊಳ್ಳಲು ಮುಂದೆ ಬಂದ ಯೇಸು ಕ್ರಿಸ್ತನಿಗೆ ನಮ್ಮ ಹೃದಯದಲ್ಲಿ ಸ್ಥಳವನ್ನು ಕೊಡಲು ಹಿಂಜರಿಯ ಬಹುದೇ? ನನ್ನ ಬಳಿ ಬರುವವರನ್ನು ನಾನು ತಳ್ಳುವುದಿಲ್ಲ ಎಂದು ಹೇಳಿದ ಯೇಸು, ನಾವು ಇಂದು ಆತನ ಬಳಿಗೆ ಬಂದರೆ ನಮ್ಮ ಪಾಪಗಳನ್ನು ಕ್ಷಮಿಸಿ ನಮಗೆ ಪರಿಶುದ್ಧ ಜೀವಿತವನ್ನು ಕೊಟ್ಟು ನಮ್ಮನ್ನು ಆಶೀರ್ವದಿಸುವನು ಇನ್ನೂ ತಡೆಯೇನು ಪ್ರಿಯರೇ?

*ಮನುಷ್ಯ ಕುಮಾರನು ಕೆಟ್ಟು ಹೋಗಿರುವದನ್ನು ಹುಡುಕಿ ರಕ್ಷಿಸುವದಕ್ಕೆ ಬಂದನು* **(ಲೂಕ 19:10)**

*ದೇವರು ಒಬ್ಬನೇ ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ ಆತನು ಮನುಷ್ಯನಾಗಿರುವ ಕ್ರಿಸ್ತ ಯೇಸುವೇ ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಬಿಟ್ಟನು.*
**(1ತಿಮೊಥೆ 5–6)**

**VOICE OF JESUS PUBLICATIONS**
P.O.Box:6,Ramanathapuram.
623501. S.Inidia.
Phone: 98941 31211- 94423 22264
Email: vojpulication@gmail.com

**VOICE OF JESUS MEDIA**
P.O.Box:7206,Bangalore- 560 072.
Ph: 9731722977
Email: vojmedia@gmail.com

ಈ ಕರಪತ್ರಿಕೆಯನ್ನು ಉಚಿತವಾಗಿ ನೀಡಲಾಗುತ್ತದೆ ಮಾರಾಟ ಮಾಡುವುದಿಲ್ಲ

VOJ.TRACTS/2013/KANNADA